ವಿಷಯ : ಉತ್ತರ ಕನ್ನಡ ಜಿಲ್ಲೆಯಲ್ಲಿ ಹೊಸ ಅಗ್ನಿಶಾಮಕ ಠಾಣೆ

255 (2076)-ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಬಂದಿಖಾನೆ, ಗೃಹರಕ್ಷಕ ದಳ, ಸೈನಿಕ ಕಲ್ಯಾಣ ಹಾಗೂ ಅಗ್ನಿಶಾಮಕ ಸೇವೆಗಳ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಹೊಸ ಅಗ್ನಿಶಾಮಕ ಠಾಣೆ ಎಲ್ಲೆಲ್ಲಿ ತೆರೆಯಲಾಗುತ್ತಿದೆ.

ಆ) ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನಲ್ಲಿ ಪ್ರತಿವರ್ಷ ಬೆಂಕಿ ದುರಂತದಿಂದ ತೊದಂರೆ ಆಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಅಂಕೋಲಾ ತಾಲ್ಲೂಕಿನಲ್ಲಿ ಹೊಸ ಅಗ್ನಿಶಾಮಕ ಠಾಣೆ ತೆರೆಯಲು ಸರ್ಕಾರದವರು ಪರಿಸೀಲಿಸಿರುವರೇ?

ಈ) ಹಾಗಿದ್ದಲ್ಲಿ ಇದರ ಬಗ್ಗೆ ಸರ್ಕಾರ ಕೈ ಗೊಳ್ಳಲಿರುವ ಕ್ರಮಗಳೇನು?

ಶ್ರೀ ವಿ. ಸೋಮಣ್ಣ
(ಬಂದಿಖಾನೆ, ಗೃಹರಕ್ಷಕ ದಳ, ಸೈನಿಕ ಕಲ್ಯಾಣ ಹಾಗೂ ಅಗ್ನಿಶಾಮಕ ಸೇವೆಗಳ ರಾಜ್ಯ ಸಚಿವರು)

ಅ) ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿ ಅಗ್ನಿಶಾಮಕ ಠಾಣೆಗಳನ್ನು ಸ್ಥಾಪಿಸಲು ಮಂಜೂರಾತಿ ನೀಡಿದೆ.

ಆ) ಅಂಕೋಲಾ ತಾಲ್ಲೂಕಿನಲ್ಲಿ ಕಳೆದ 3 ವರ್ಷಗಳಿಂದ ಉಂಟಾದ ಅಗ್ನಿ ದುರಂತದ ವರದಿಗಳು ಹೀಗಿವೆ.

1993	3 ಕರೆ
1994	1 ಕರೆ
1995	1 ಕರೆ
1996	4 ಕರೆ

ಇ) ಮೇಲಿನ ಅಗ್ನಿ ದುರಂತದಲ್ಲಿ ಯಾವ ಸಾವು ಇರುವುದಿಲ್ಲ.ಸರ್ಕಾರಕ್ಕೆ ದಿನಾಂಕ 7-7-97 ರಲ್ಲಿ ಪ್ರಸ್ತಾವನೆಬಂದಿದ್ದು ಅದನ್ನು 97-98ರ ಸಾಲಿನಲ್ಲಿ ಪರಿಶೀಲಿಸಲಾಗಿದೆ.

ಈ) ಪರಿಶೀಲನೆಯಲ್ಲಿದೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಅಧ್ಯಕ್ಷರೇ, ನನ್ನ ಪ್ರಶ್ನೆಯಲ್ಲಿ ಬೆಂಕಿ ದುರಂತದಿಂದ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದರೆ. 93ರಲ್ಲಿ 3 ಕರೆ, 94ರಲ್ಲಿ 1 ಕರೆ 95ರಲ್ಲಿ 1 ಕರೆ 96 ರಲ್ಲಿ 4 ಕರೆ ಮತ್ತು ಯಾವ ಸಾವೂ ಸಂಭವಿಸಿಲ್ಲ ಎಂದು ತಿಳಿಸಿದ್ದಾರೆ. ಬೆಂಕಿ ದುರಂತದಿಂದ ತೊಂದರೆಯೇನಾಗಿದೆ ಎಂದು ಕೇಳಿದ್ದರೆ 3 ಕರೆ 1 ಕರೆ ಮಾತ್ರ ಬಂದಿದೆಯೆಂದು ಮಾತ್ರ ಹೇಳಿರುವುದರಿಂದ ಯಾರ ಹಾನಿ ಆಗಿದೆ ಎಂಬ ಬಗ್ಗೆ ಸ್ಪಷ್ಟ ಮಾಹಿತಿ ಇಲ್ಲ. ನಿಮ್ಮ ಇಲಾಖೆ ಬರೀ ಫೋನ್ ಕರೆಗಳನ್ನಷ್ಟೇ ಲೆಕ್ಕಕ್ಕೆ ತೆಗೆದುಕೊಳ್ಳದೆ ರೆವಿನ್ಯೂನವರಿಂದ ಲೆಕ್ಕ ತೆಗೆದುಕೊಳ್ಳುವ ಯಾವುದಾದರೂ ವ್ಯವಸ್ಥೆ ಇದೆಯಾಯೋ ಎರಡನೆಯದಾಗಿ, ಅಂಕೋಲಾದಲ್ಲಿ ಈ ವರ್ಷ ಅಗ್ನಿಶಾಮಕದಳ ಪ್ರಾರಂಭಿಸುವುದಕ್ಕೆ ನಾವು ಪರಿಶೀಲಿಸುತ್ತಿದ್ದೇವೆ ಎಂದು ಹೇಳಿದ್ದೀರಿ, ಮೇಲಿನ ಪ್ರಶ್ನೆಗೆ ಈ ವರ್ಷ ದಾಂಡೇಲಿಯಲ್ಲಿ ಮಂಜೂರಾತಿ ಕೊರಲಾಗಿದೆ ಎಂದೂ ಹೇಳಿದ್ದೀರಿ, ಪರಿಶೀಲನೆ ಅಂದರೆ ನೀವು ಯಾವ್ಯಾವ ಆದ್ಯತೆಗಳನ್ನು ಗಮನಿಸಿ ನಿಶ್ಚಯಮಾಡುತ್ತೀರಿ?

ಶ್ರೀ ವಿ. ಸೋಮಣ್ಣ : ಅಧ್ಯಕ್ಷರೇ, ನಮ್ಮ ಇಲಾಖೆಗೆ ಬರುವ ದೂರುಗಳನ್ನು ಎಂಟ್ರಿ ಮಾಡಿಕೊಳ್ಳುತ್ತಿದ್ದೆವು. ಇವತ್ತು ತಾವು ಬಹಳ ಉಪಯುಕ್ತ ಸಲಹೆ ಕೊಟ್ಟಿದ್ದೀರಿ. ತಕ್ಷಣ ನಮ್ಮ ಇಲಾಖೆ ಅಧಿಕಾರಿಗಳು ಎಲ್ಲಾ ತಾಲ್ಲೂಕುಗಳಲ್ಲಿ ಬೆಂಕಿ ದುರಂತ ಸಂಭವಿಸಿದರೆ ಅದರ ಮಾಹಿತಿಯನ್ನು ರೆವಿನ್ಯೂದವರಿಂದ ತೆಗೆದುಕೊಳ್ಳಲು ಕ್ರಮ ತೆಗೆದುಕೊಳ್ಳುತ್ತೇವೆ. ಮತ್ತೆ, ಅಂಕೋಲಾ ವ್ಯಾಪ್ತಿಯಲ್ಲೇ ಬರುವ ದಾಂಡೇಲಿಗೆ ಈಗಾಗಲೇ ಅಗ್ನಿಶಾಮಕದಳ ಮಂಜೂರಾತಿಯಾಗಿದೆ. ತಾತ್ಕಾಲಿಕ ಶೆಡ್‌ನಲ್ಲಿ ಇನ್ನು ಕೆಲವೇ ದಿನಗಳಲ್ಲಿ ಪ್ರಾರಂಭಿಸುತ್ತಿದ್ದೇವೆ. ಅಧ್ಯಕ್ಷರೇ, 8-8-96 ರಿಂದ 1-5-97ರವರೆಗೆ 18 ಹೊಸಠಾಣೆಗಳನ್ನು ಪ್ರಾರಂಭಿಸಿದ್ದೇವೆ. ಅಂಕೋಲಾದಲ್ಲೂ 97-98ರ ಬಜೆಟ್‌ನಲ್ಲಿ ಸೇರಿಸಿ, ಈಗಾಗಲೇ ಅಂಕೋಲಾದಲ್ಲಿ ಕೊಟ್ಟಿರುವುದರಿಂದ ಒಂದೇ ತಾಲ್ಲೂಕಿನಲ್ಲಿ ಎರಡು ಠಾಣೆ ಬೇಡ ಎಂಬುದಿದ್ದರೂ ತಮ್ಮ ಪತ್ರದ ಆಧಾರದ ಮೇಲೆ ಅಂಕೋಲಾದಲ್ಲಿ ಅವಶ್ಯಕತೆ ಇದೆ ಎಂಬುದು ನಮ್ಮ ಗಮನಕ್ಕೆ ಬಂದಿದೆ. 1997-98ರ ವ್ಯಾಪ್ತಿಯಲ್ಲಿ ಅದನ್ನು ಸೇರಿಸಿಕೊಳ್ಳಲು ಸರ್ಕಾರ ಪ್ರಯತ್ನ ಮಾಡುತ್ತದೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಪ್ರಯತ್ನ ಮಾಡಲಾಗುವುದು ಎಂದು ಹೇಳಿದರು, ಆದರೆ ಬಹಳ ಅಗತ್ಯತೆ ಇದೆ. ಏಕೆಂದರೆ ಕಳೆದ ವರ್ಷದಲ್ಲಿ 15 ದುರಂತಗಳಾಗಿವೆ. ಆದ್ದರಿಂದ ಮಂಜೂರಾತಿ ಮಾಡಬೇಕೆಂದು ನನ್ನ ಆಗ್ರಹ.

ಶ್ರೀ ವಿ. ಸೋಮಣ್ಣ : ಅಧ್ಯಕ್ಷರೇ ವರ್ಷಕ್ಕೆ 15 ಠಾಣೆ ಪ್ರಾರಂಭಿಸಲು ಆಯವ್ಯಯದಲ್ಲಿ ನಮಗೆ ಮಂಜೂರಾತಿ ಇದೆ. ಇವುಗಳನ್ನು ಮಾಡಲು ಅರ್ಥಮಂತ್ರಿಗಳಲ್ಲಿಮನವಿಯನ್ನೂ ಸಲ್ಲಿಸಿದ್ದೇವೆ. ಆದ್ದರಿಂದ 1997-98ರಲ್ಲಿ ಅಂಕೋಲಾಕ್ಕೆ ಅಗ್ನಿಶಾಮಕ ಠಾಣೆ ಕೊಡಲು ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ. ಹಾಗೆಯೇ ಹುಬ್ಬಳ್ಳಿಯು ಅಗ್ನಿಶಾಮಕ ಠಾಣೆಗಾಗಿ ಜಾಗವನ್ನು ನಾನು ನೋಡಿದ್ದೇನೆ. ಒಂದು ಠಾಣೆ ತೆರೆಯಬೇಕಾದರೆ ಕನಿಷ್ಠ ಎರಡು ಎಕರೆ ಜಾಗ ಬೇಕಾಗುತ್ತದೆ. ನಾನು ಎರಡು ಸಾರಿ ಹೋದಾಗಲೂ ಮಾನ್ಯ ಸದಸ್ಯರು ನನಗೆ ಸಿಗಲಿಲ್ಲ. ಹುಬ್ಬಳ್ಳಿ ಒಳಗಡೆ ಅವರು ಜಾಗ ಕೊಟ್ಟರೆ ನಾವು ಅಲ್ಲಿ ತೆರೆಯುತ್ತೇನೆ. ನೀವು ಬಂದು ನನ್ನನ್ನು ನೋಡಿ.

ಅಧ್ಯಕ್ಷರು : ಈಗ ಪ್ರಶ್ನೋತ್ತರ ಮುಗಿಯಿತು.

3) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಆರ್. ವಿ. ದೇಶಪಾಂಡೆ : (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) ಅಧ್ಯಕ್ಷರೇ, 17ನೇ ಪಟ್ಟಿಯಲ್ಲಿನ ಈ ದಿನದ ಲಿಖಿತ ಮೂಲಕ ಉತ್ತರಿಸುವ 28 ಪ್ರಶ್ನೆಗಳ ಪೈಕಿ 21 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಪಡಿತರ ಪದ್ಧತಿಯಲ್ಲಿ ಕೇಂದ್ರದಿಂದ ಹೆಚ್ಚಿನ ಆಹಾರ ಧಾನ್ಯಗಳ ಕೋಟಾವನ್ನು ಪಡೆಯುವುದು

1482 (2160)-ಶ್ರೀ ಅಲ್ಲೂರಿ ವೀರಭದ್ರಪ್ಪ (ಕುರುಗೋಡು) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಸಾರ್ವಜನಿಕ ವಿತರಣೆ ವ್ಯವಸ್ತೆ ಮೂಲಕ ಸಾರ್ವಜನಿಕರಿಗೆ ವಿತರಿಸಲಾಗುವ ಅಕ್ಕಿ ಮತ್ತು ಸಕ್ಕರೆಯ ತಿಂಗಳ ಕೋಟಾನನ್ನು ಪ್ರತೀ ಕಾರ್ಡಿಗೆ ತಿಂಗಳಿಗೆ 1 ಕೆ.ಜಿ. ಯಿಂದ 2 1/2 ಕೆ.ಜಿ.ಗೆ ಇಳಿಸಿ ಸುತ್ತೋಲೆಯೊಂದನ್ನು ಸರ್ಕಾರವು ಹೊರಡಿಸಿದೆಯೇ?

ಆ) ಹಾಗಿದ್ದಲ್ಲಿ ಕಾರಣಗಳೇನು?

ಇ) ಕೇಂದ್ರದಿಂದ ಹೆಚ್ಚುವರಿ ಕೋಟಾವನ್ನು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?